ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 05.09.2024.

**ಪಾಟೀ ಸವಾಲು – ವಾದಿ ಪರಃ ವಕೀಲರಿಂದಃ**

ನನಗೆ ಓದಲು ಬರೆಯಲು ಬರುತ್ತದೆ. ನನಗೆ ಇಂಗ್ಲೀಷ ಓದಲು ಬರುತ್ತದೆ. ನನ್ನ ಮುಖ್ಯ ಪ್ರಮಾಣ ಪತ್ರವನ್ನು ಬರೆಯಲುಯಾರು ಮಾಹಿತಿ ಕೊಟ್ಟಿದ್ದಾರೆ ಗೊತ್ತಿಲ್ಲಾ ವಾದಿಯರು ನನ್ನ ಮೇಲೆ ಯಾವ ಕಾರಣಕ್ಕಾಗಿ ದಾವೆ ಸಲ್ಲಿಸಿದ್ದಾರೆ ಅಂತಾ ನನಗೆ ಮಾಹಿತಿ ಇಲ್ಲಾ. ನನ್ನ ಪ್ರತಿವಾದ ಪತ್ರ ಸಲ್ಲಿಸಲು ಮಾಹಿತಿ ಯಾರು ಕೊಟ್ಟಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ ವಾದಿಯರು ನನ್ನ ಮೇಲೆ ಯಾವ ಮಾಗಣಿ ಮಾಡಿ ದಾವೆ ಮಾಡಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ.

1 ನೇ ವಾದಿಯ ಗಂಡ ನನಗೆ ಸಂಬಂಧಿಕನಾಬೇಕು ಎಂದರೆ ಸರಿಯಲ್ಲಾ. ನಾನು ಬೆಟ್ಟದ ಮಲ್ಲೇಶ್ವರ ನಗರದಲ್ಲಿ ವಾಸವಾಗಿದ್ದೇನೆ. ನಾನು ಹೊಂಡದೆ ಓಣಿಯಲ್ಲಿ ಮೊದಲು ಬಾಡಿಗೆ ಮನೆಯಲ್ಲಿ ವಾಸ ಇದ್ದೆ. ಬಸವರಾಜ ಆದಾಪುರ ಇವರ ಜಾಗೆಯನ್ನು ತೆಗೆದುಕೊಂಡು ಮನೆ ಕಟ್ಟಿ ವಾಸವಾಗಿದ್ದೇನೆ. ನಿಡಿ–01 ರ ಪ್ರಕಾರ ದಾವಾ ಆಸ್ತಿ ಸರ್ಕಾರದ ಯೋಜನೆಯ ಅಡಿಯಲ್ಲಿ ಬಸವರಾಜ ಆದಾಪುರ ಇವರಿಗೆ ಮಂಜೂರು ಆಗಿದೆ ಅಂದರೆ ಸರಿ. 2019 ರಲ್ಲಿ ಬಸವರಾಜ ಆದಾಪುರ ಇವರ ಹೆಸರಿಗೆ ಮನೆ ಮಂಜೂರಾತಿ ಆದ ಬಗ್ಗೆ ಪ್ರಮಾಣಪತ್ರ ನೀಡಿದ್ದಾರೆ ಅಂದರೆ ಸರಿ. ಬಸವರಾಜ ಆದಾಪುರ ಮರಣ ಹೊಂದಿದ ನಂತರ 1 ರಿಂದ 3 ನೇ ವಾದಿಯರಿಗೆ ದಾವಾ ಆಸ್ತಿ ದಿನಾಂಕಃ 05.04.2019 ರಂದು ಆಗಿದೆ ಎಂದರೆ ಸಾಕ್ಷಿಯು ಮೀಲಾಪಿಯಾಗಿ ಅವರ ಹೆಸರು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 1 ರಿಂದ 3

ನೇ ವಾದಿಯರ ಹೆಸರಿಗೆ ಇ-ಸ್ವತ್ತು ಪುರಸಭೆಯವರು ನೀಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲಾ. ಪುರಸಭೆಯವರು ಇ-ಸ್ವತ್ತು ನೀಡಿದ್ದರು ಸಹಿತ ನನಗೆ ಮಾಹಿತಿ ಇಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.